ಆರೋಗ್ಯ ಕವಚ ಯೋಜನೆ ಕಾರ್ಯ ಕ್ರಮದ ಬಗ್ಗೆ.

9(132) ಶ್ರೀ ಕೆಎಂ. ಶಿವಲೆಂಗೇಗೌಡ (ಅರಸೀಕೆರೆ)
ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಆರೋಗ್ಯ ಕವಚ ಯೋಜನೆಯಲ್ಲಿ 108 ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡುವುದು;

ಆರೋಗ್ಯ ಕವಚ ಯೋಜನೆಯನ್ನು 1-11-2008 ರಿಂದ ಜಾರಿಗೆ ತರಲಾಗಿದೆ.

ಯಾವುದೇ ತುರ್ತು ಕರೆಯನ್ನು ಮೊಬೈಲ್ ಅಥವಾ ನೇರ ದೂರವಾಣಿ ಮೂಲಕ ಸಂಖ್ಯೆ 108ಕ್ಕೆ ಮಾಡಿದಲ್ಲಿ ಅದು ಅಪಘಾತ, ಹಾವು ಕಡಿತ, ಗರ್ಭಿಣಿ ಪ್ರಕರಣಗಳು ಇತ್ಯಾದಿ ವೈದ್ಯಕೀಯಕ್ಕೆ ಸಂಬಂಧಿಸಿದವೂ ಅಲ್ಲದೆ ಪೊಲೀಸ್ ಮತ್ತು ಅಗ್ನಿ ಶಾಮಕಕ್ಕೆ ಸಂಬಂಧಿಸಿದ ಯಾವುದೇ ಕರೆ ಇದ್ದರೂ ಸ್ವೀಕರಿಸಿದ ಕೇಂದ್ರದಲ್ಲಿನ ತುರ್ತುಸ್ಥಿತಿ ನಿರ್ವಹಿಸುವ ತಂಡವು ಆ ಕರೆಯ ಬಗ್ಗೆ ತಕ್ಷಣ ಕಾರ್ಯಪ್ರಮುಖವಾಗುತ್ತದೆ. ಸದರಿ ಕೇಂದ್ರವು ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ಇತರೆ ಆಧುನಿಕ ಉಪಕರಣಗಳನ್ನೊಳಗೊಂಡ ಆಂಬುಲೆನ್ಸ್‌ನ್ನು ಘಟನೆಯ ಸ್ಥಳಕ್ಕೆ ವಿಳಂಬವಿಲ್ಲದೆ ಕಳುಹಿಸಲು ಏರ್ಪಾಡು ಮಾಡುತ್ತದೆ. ಆ ಘಟನೆಯ ಸ್ಥಳದಲ್ಲಿ ತುರ್ತು ಚಿಕಿತ್ಸೆಯನ್ನು ನೀಡುವ ಮೂಲಕ ರೋಗಿಯ ಆರೋಗ್ಯವನ್ನು ಸುಧಾರಿಸಿ, ತಕ್ಷಣ ಆಸ್ಪತ್ರೆಗೆ ಸೇರಿಸುವ ವ್ಯವಸ್ಥೆ ಮಾಡಲಾಗುತ್ತದೆ.

ಆ) ಸಂಸ್ಥೆಯೊಂದಿಗೆ ಎಂ.ಓ.ಯು. ಒಪ್ಪಂದದಂತೆ ಪ್ರತಿ ಕಿ.ಮೀ. ಗೆ ತಗಲುವ ವೆಚ್ಚ ಎಷ್ಟು;

ಒಂಪ್ಪಂದದ ಪ್ರಕಾರ ವೆಚ್ಚ ಕುರಿತಂತೆ ಕಿಲೋ ಮೀಟರ್ ಆಧಾರದ ಮೇಲೆ ಈ ಯೋಜನೆಯನ್ನು ರೂಪಿಸಿಲ್ಲ. ಆದರೆ, ಒಂದು ಟ್ರಿಪ್‌ಗೆ ಸರಾಸರಿ 20 ರಿಂದ 25 ಕಿಲೋ ಮೀಟರ್ ಆಗುತ್ತದೆ ಎಂದು ಹಾಗೂ ಸರಾಸರಿ 2008-09ನೇ ಸಾಲಿನಲ್ಲಿ 3 ರಿಂಧ 5 ಟ್ರಿಪ್‌ಗಳು, 2009-10ನೇ ಸಾಲಿನಲ್ಲಿ 6 ಟ್ರಿಪ್‌ಗಳು ಹಾಗೂ 2010-11 ರಿಂದ 7 ರಿಂದ 9 ಟ್ರಿಪ್‌ಗಳು ಆಗುವುದೆಂದು ಲೆಕ್ಕಾಚಾರ ಹಾಕಲಾಗಿದೆ. ಮುಂದುವರೆದು, ಪ್ರತಿ ಲೀಟರ್ ಇಂಧನಕ್ಕೆ 8 ಕಿ.ಮೀ. ಚಲಿಸುವುದೆಂದು ಒಪ್ಪಂದದಲ್ಲಿ ನಮೂದಿಸಲಾಗಿದೆ. ಪ್ರಸ್ತುತ 208 ಆಂಬುಲೆನ್ಸ್‌ಗಳ ಸೇವೆ ಒದಗಿಸಲಾಗಿದ್ದು, ಮಾರ್ಚ್-2010 ರ ವೇಳೆಗೆ ಉಳಿದ 309 ಆಂಬುಲೆನ್ಸ್‌ಗಳ ಸೇವೆಯನ್ನು ಲಭ್ಯಪಡಿಸಲಾಗುವುದು. ಯೋಜನೆಯು ಪೂರ್ಣಗೊಂಡ ನಂತರವೇ ಒಟ್ಟಾರೆ ಸರಾಸರಿ ಟ್ರಿಪ್‌ಗಳ ಲೆಕ್ಕ ಸಿಗುತ್ತದೆ.

ಇ) ಸಂಸ್ಥೆಯವರಿಗೆ ಸರ್ಕಾರವು ನೀಡಿರುವ ಮುಂಗಡ ಹಣ ಎಷ್ಟು;

ದಿನಾಂಕ: 1-11-2008 ರಿಂದ 31-03-2009 ರ ಅವಧಿಯಲ್ಲಿ ಇ.ಅಂ.ಆರ್.ಐ. ಸಂಸ್ಥೆಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಒಟ್ಟು ರೂ.40 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಈ) ಆಂಬುಲೆನ್ಸ್‌ನಲ್ಲಿರುವ ನರ್ಸ್‌ಗಳಿಗೆ ತರಬೇತಿ ನೀಡಿರುವ ಅವಧಿ ಎಷ್ಟು;

ಈ ಯೋಜನೆಯಡಿ ಪ್ರತಿ ಎಮರ್ಜೆನ್ಸಿ ಮ್ಯಾನೇಜ್‌ಮೆಂಟ್ ಟೆಕ್ನೀಷಿಯನ್ (ನರ್ಸ್ ಸೇರಿದಂತೆ) ಒಟ್ಟಾರೆ 45 ದಿನಗಳ ತರಬೇತಿಯನ್ನು ಇ.ಎಂ.ಆರ್.ಐ. ಸಂಸ್ಥೆಯ ವತಿಯಿಂದ ಪಡೆದಿದ್ದಾರೆ.

ಉ) ಎ.ಎನ್.ಎಂ. ವತಿಯಿಂದ ಕಂಪನಿ ನೀಡುವ ತರಬೇತಿ ಅವಧಿ ಎಷ್ಟು ಹಾಗೂ ನೀಡುವ ಸಂಬಳವೆಷ್ಟು?

45 ದಿನಗಳ ತರಬೇತಿಯನ್ನು ಎಮರ್ಜೆನ್ಸಿ ಮ್ಯಾನೇಜ್‌ಮೆಂಟ್ ಟೆಕ್ನೀಷಿಯನ್‌ಗಳಿಗೆ ಇ.ಎಂ.ಆರ್.ಐ. ವತಿಯಿಂದಲೇ ನೀಡಲಾಗಿದೆ. ಪ್ರತಿ ಎಮರ್ಜೆನ್ಸಿ ಮ್ಯಾನೇಜ್‌ಮೆಂಟ್ ಟೆಕ್ನೀಷಿಯನ್‌ಗೆ ಮಾಸಿಕ ರೂ. 6603/- ಸಂಚಿತ ವೇತನ ನೀಡಲಾಗುತ್ತಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ಆರೋಗ್ಯ ಕವಚ ಯೋಜನೆಯ ವಿಚಾರದಲ್ಲಿ ಚರ್ಚೆಯಾಗಿದೆ. ಇದು ಒಳ್ಳೆಯ ಯೋಜನೆಯೆಂದು ನಾವೆಲ್ಲ ತಿಳಿದುಕೊಂಡಿದ್ದೇವೆ. ಅದರಲ್ಲಿ ಎರಡನೇ ಮಾತೇ ಇಲ್ಲ. ಆದರೆ, ಈ ಆರೋಗ್ಯ ಕವಚ ಯೋಜನೆಯನ್ನು ಜಾರಿಗೆ ತಂದಿರತಕ್ಕಂಥ ರೀತಿ ಏನಿದೆ, ಅದರ ಹಿಂದುಗಡೆ MoU ಏನು ಮಾಡಿಕೊಂಡಿದ್ದಾರೆ ಅದರ ಬಗ್ಗೆ ಅನುಮಾನವಿದೆ. ಇವರಿಗೆ, ಆ Ambulance ಒಂದು ಕಿ.ಮೀ.ಗೆ ಹೋಗಿ ಬರುವುದಕ್ಕೆ ಎಷ್ಟು ಹಣವನ್ನು ವೆಚ್ಚ ಮಾಡುತ್ತಾರೆಂದು ನಾನು ಕೇಳಿದ್ದೆ. ಅದಕ್ಕೆ ಅವರು ಉತ್ತರ ಕೊಟ್ಟಿಲ್ಲ. ಅದರಲ್ಲಿ ಅವರು trip ಗೆ agreement ಮಾಡಿಕೊಂಡಿದ್ದೇವೆಂದು ಹೇಳಿದ್ದಾರೆ. ಹಾಗಾದರೆ, ಒಂದು trip ಗೆ ಎಷ್ಟು ಹಣ ಕೊಡುತ್ತೀರೆಂದು ಅದಾದರೂ ಹೇಳಬೇಕಲ್ಲವೇ? ಇದು ಸರ್ಕಾರದ ಹಣ. ಆಮೇಲೆ, ಇದು ಬಹಳ ದೊಡ್ಡ ಯೋಜನೆ ಎಂದು ಆ ಸಂಸ್ಥೆ ಜೊತೆ agreement ಮಾಡಿಕೊಳ್ಳಬೇಕಾದರೆ ಅವರು 5% reduction ಕೊಡುವುದು, ತದನಂತರ ಅವರಿಗೆ 40 ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಮುಂಗಡವಾಗಿ ಕೊಟ್ಟಿದ್ದಾರೆ. ಆ 40 ಕೋಟಿ ರೂಪಾಯಿಗಳನ್ನು ಅವರಿಗೆ ಕೊಟ್ಟಮೇಲೆ ಆ ಹಣವನ್ನು ಖರ್ಚು ಮಾಡಿರುವುದಕ್ಕೆ ಅವರಿಂದ ಏನು ರಶೀದಿ ಪಡೆಯಬೇಕು, ಯಾವ ರೀತಿ ಪಡೆಯಬೇಕೆನ್ನುವಂಥದ್ದು, ಇವೆಲ್ಲ ದೃಷ್ಟಿಯಿಂದ ಯೋಚನೆ ಮಾಡಿದಾಗ ನನಗೆ ಬೇಕಾಗಿರಕ್ಕಂಥದ್ದು ಒಂದು ಕಿ.ಮೀ.ಗೆ ಎಷ್ಟು ವೆಚ್ಚ ಮಾಡುತ್ತಾರೆನ್ನುವುದು.

ಶ್ರೀ ಬಿ.ಎನ್.ಬಚ್ಚೇಗೌಡ : ಇವೆಲ್ಲವನ್ನು supplementaryಯಲ್ಲಿ ಕೇಳಲಿ.

(ಗೊಂದಲ)

ಅಧ್ಯಕ್ಷರು : ಆ ಪ್ರಶ್ನೆಯಲ್ಲಿ ಈ subject ಇದೆ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ : ನನ್ನ ಪ್ರಶ್ನೆಯಲ್ಲಿ ಒಂದು ಕಿ.ಮೀ.ಗೆ ಎಷ್ಟು ಖರ್ಚಾಗುತ್ತದೆಂದು ಕೇಳಿದ್ದೇನೆ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಬಚ್ಚೇಗೌಡರೆ, ಇದು ಉಪಪ್ರಶ್ನೆಯಲ್ಲಿ ಇದೆ. ತಾವು ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಬಚ್ಚೇಗೌಡರೆ, ನಾನು ಇಲ್ಲಿಂದ ನೋಡುತ್ತಿದ್ದೇನೆ. ಇದು subject ಇದೆ. ಅವರು Subject ಬಿಟ್ಟು ಹೋಗುತ್ತಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಒಂದು ಕಿ.ಮೀ.ಗೆ ಎಷ್ಟು ಹಣವನ್ನು ಆ ಸಂಸ್ಥೆಗೆ ನೀಡುತ್ತಿದ್ದೀರಿ ಎಂದು ನಾನು ನೇರವಾಗಿ ಸರ್ಕಾರಕ್ಕೆ ಪ್ರಶ್ನೆ ಕೇಳುತ್ತಿದ್ದೇನೆ. ಇನ್ನು, ಆರೋಗ್ಯ ಕವಚ ಯೋಜನೆಯ, ಆ Ambulance ಚರಿತ್ರೆಯನ್ನು ಪ್ರಶ್ನೆಯಲ್ಲಿ ಕೇಳಿದ್ದೆ. ಅದಕ್ಕೆ ಉತ್ತರವನ್ನು ಕೊಡಬೇಕಿತ್ತು. ಆ Ambulance ಅನ್ನು ಕೊಂಡುಕೊಳ್ಳುವುದಕ್ಕೆ ಯಾರ ಹಣವನ್ನು ಉಪಯೋಗಿಸಲಾಗಿದೆ? ಅದನ್ನು ಸರ್ಕಾರದ ಹಣದಿಂದ ಕೊಂಡುಕೊಳ್ಳಲಾಗಿದೆ. ಯಾವ್ಯಾವ ಒಪ್ಪಂದ ಮಾಡಿಕೊಂಡಿದ್ದೀರಿ? ಇದರ ಬಗ್ಗೆ ಹೇಳಬೇಕು. ಇದು ಸಾರ್ವಜನಿಕವಾಗಿ ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ಚಿನ್ನದ ಸೂಜಿ ಎಂದು ಕಣ್ಣಿಗೆ ಚುಚ್ಚಿಕೊಂಡರೆ ರಕ್ತ ಬರುವುದೇ ಹೊರತು ಬೇರೇನೂ ಬರುವುದಿಲ್ಲ. ದಯವಿಟ್ಟು, ಅದರ ಸಂಪೂರ್ಣವಾದ ಮಾಹಿತಿಯನ್ನು ತಿಳಿಸಿ ಎಂದರೆ, ಅದನ್ನು ಮಾಡಿಕೊಂಡಿದ್ದೇವೆ, ಇದನ್ನು ಮಾಡಿಕೊಂಡಿದ್ದೇವೆಂದು ಹೇಳಿದರೆ ಪ್ರಯೋಜನವಾಗುವುದಿಲ್ಲ. ಅವರಿಗೆ 40 ಕೋಟಿ ರೂಪಾಯಿಗಳನ್ನು ಮುಂಗಡ ಕೊಟ್ಟಿದ್ದೀರಿ. ಇದು ನಮಗೆ ಮೊದಲು ಗೊತ್ತಿರಲಿಲ್ಲ. ಸತ್ಯಂ ಕಂಪನಿಯವರು, ಕರ್ನಾಟಕ ರಾಜ್ಯದ ಜನರಿಗೆ Rotary club ನವರು ಯಾವ ರೀತಿ free ಯಾಗಿ ಕೊಡುತ್ತಾರೆ, ಆ ರೀತಿ ಅವರು free ಯಾಗಿ Ambulance ಕೊಟ್ಟಿದ್ದಾರೆಂದು ನಾವು ತಿಳಿದುಕೊಂಡಿದ್ದೇವು. 30 ರೂ. Per k.m. work out ಆಗುತ್ತಿದೆ ಎಂದು ಹೇಳುತ್ತಾರೆ. ಇವತ್ತು ಈ ರಾಜ್ಯದ ಜನರು 30 ರೂ.ನಂತೆ ವೆಚ್ಚವಾಗುವುದಾದರೆ, ಈ ಯೋಜನೆ ಒಳ್ಳೆಯದಿರಬಹುದು, ಆದರೆ, ಅದರ ಹಿಂದೆ ಇರುವ ಹಣದ ವ್ಯವಸ್ಥೆ ಏನಿದೆ, ನೀವು ಮಾಡಿಕೊಂಡಿರುವ ಒಪ್ಪಂದವೇನಿದೆ, ಅದರ ಬಗ್ಗೆ ಸವಿಸ್ತಾರವಾಗಿ ಚರ್ಚೆಯಾಗಬೇಕು, ರಾಜ್ಯ ಜನತೆಗೂ

ಗೊತ್ತಾಗಬೇಕು. ಇದರ ಬಗ್ಗೆ ನಾನು ಬಹಳಷ್ಟು ಸಲ ಚರ್ಚೆ ಮಾಡಿದ್ದೇನೆ. ಅಧಿಕಾರಿಗಳನ್ನು ಕೇಳಿದರೆ, ಯಾರೂ ಇದರ ಬಗ್ಗೆ ಉತ್ತರ ಕೊಡುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು : ಶಿವಲಿಂಗೇಗೌಡರವರೆ, ನೀವು specific ಆಗಿ ಪ್ರಶ್ನೆ ಕೇಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇಲ್ಲಿ ಬಹಳ technique ಆಗಿ ಉತ್ತರ ಕೊಡುವುದನ್ನು ಕಲಿತಿದ್ದಾರೆ.

ಅಧ್ಯಕ್ಷರು : ಆಯಿತು, ಏನು ಮಾಹಿತಿ ಬೇಕೋ ಅದನ್ನು ನೇರವಾಗಿ ಕೇಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ನಾವೇನು ಕೇಳುತ್ತೇವೆ ಅದಕ್ಕೆ ತಪ್ಪಿಸಿಕೊಳ್ಳುವುದನ್ನು ಬಿಟ್ಟು ನೇರವಾಗಿ ಉತ್ತರ ಕೊಡಬೇಕು.

ಅಧ್ಯಕ್ಷರು : ಇದು ಪ್ರಶ್ನೋತ್ತರ, ಬಜೆಟ್‌ನ ಮೇಲಿನ ಚರ್ಚೆಯಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇದು ಸಾರ್ವಜನಿಕರ ಹಣ. ದಯಮಾಡಿ, ಆ ಒಪ್ಪಂದವೇನಿದೆ, ಆ ಒಪ್ಪಂದದ ಪ್ರಕಾರ ಅವರಿಗೆ ಕಿ.ಮೀ.ಗೆ ಎಷ್ಟು ಹಣ ಕೊಡುತ್ತಿದ್ದೀರಿ ಅದನ್ನು ನಮಗೆ ತಿಳಿಸಬೇಕು. ಅದನ್ನೆಲ್ಲ ಬಹಿರಂಗಪಡಿಸಿ. ಅದು ಬಿಟ್ಟು technique ಆಗಿ ಉತ್ತರ ಕೊಡುವುದಲ್ಲ.. ..

ಅಧ್ಯಕ್ಷರು : ಶಿವಲಿಂಗೇಗೌಡರವರೆ, ಪುನಃ ಪುನಃ ಹೇಳಿದರೆ I will not allow. Specific ಆಗಿ ಪ್ರಶ್ನೆ ಕೇಳಿ ಎಂಧರೆ, ನೀವು ಕೇಳುತ್ತಿಲ್ಲ. ಪುನಃ ಹೇಳಿದ್ದನ್ನೇ ಹೇಳುತ್ತಿದ್ದೀರಿ.

ಶ್ರೀ ಬಿ. ಶ್ರೀರಾಮುಲು : MOU ಗೆ ದಿನಾಂಕ: 14-08-2008ರಲ್ಲಿ ಸಹಿ ಮಾಡಿದೆ. ಅದಕ್ಕೆ ಚಾಲನೆ ಕೊಟ್ಟಿದ್ದು ದಿ:1-11-2008ರಲ್ಲಿ. ರಾಜ್ಯದಲ್ಲಿ ಸುಮಾರು 208 Ambulanceಗಳು ಕೆಲಸ ಮಾಡುತ್ತಿವೆ. ಈ ರಾಜ್ಯದಲ್ಲಿರುವ ಜನರು, ಸಾರ್ವಜನಿಕರು, ರೈತರು, ಬಡವರೆಲ್ಲ ಸೇರಿ ಸುಮಾರು 42 ಲಕ್ಷ ಜನರು ತಮಗೆ ಹಾವು ಕಡಿದಿದ್ದರೆ, ಚೇಳು ಕಡಿದಿದ್ದರೆ, ಹೆರಿಗೆ ಆದ ಸಂದರ್ಭದಲ್ಲಿ ತೊಂದರೆಯಾಗಿದ್ದರೆ ಫೋನ್ ಕರೆ ಮಾಡಿದ್ದಾರೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಹಣ ಎಷ್ಟಾಗುತ್ತೆನ್ನುವುದನ್ನು ಹೇಳಿ?

ಅಧ್ಯಕ್ಷರು : ಶಿವಲೆಂಗೇಗೌಡರವರೆ, ಸಚಿವರು ಉತ್ತರ ಹೇಳುವುದಕ್ಕೆ ಬಿಡಿ. ಅವರು complete ಮಾಡಲಿ. ನೀವು ಅಷ್ಟೂ ಕಾಯುವುದಕ್ಕಾಗುವುದಿಲ್ಲವೇ?

ಶ್ರೀ ಹೆಚ್.ಸಿ. ಬಾಲಕೃಷ್ಣ : ದಯಮಾಡಿ, ಸಚಿವರು ಹೇಳಬೇಕು, 42 ಲಕ್ಷ ಜನರು ಫೋನ್ ಮಾಡಿದ್ದಾರೆಂದೇನು ಹೇಳಿದ್ದಾರೆ, ಅಷ್ಟೂ ಜನರೂ ಅವರಿಗೇ ಫೋನ್ ಮಾಡಿದ್ದಾರೆಯೇ? ಇಲ್ಲವೇ, Health Secretary ಯವರಿಗೆ ಫೋನ್ ಮಾಡಿದ್ದಾರೆಯೇ? ಯಾರಿಗೆ ಫೋನ್ ಮಾಡಿದ್ದಾರೆಂದು ಹೇಳಬೇಕು.

ಶ್ರೀ ಬಿ. ಶ್ರೀರಾಮುಲು : 42 ಲಕ್ಷ ಫೋನ್ ಕರೆಗಳನ್ನು ನನಗೆ ಮಾಡಿದ್ದಾರೆಂದು ನಾನು ಹೇಳಲಿಲ್ಲ. 108 ಫೋನ್ ಸಂಖ್ಯೆ ಇದು ಆರೋಗ್ಯ ಕವಚದ ದೂರವಾಣಿ ಎಂದು ಸಾಧಾರಣವಾಗಿ ಎಲ್ಲರಿಗೂ ಗೊತ್ತಿದೆ. ಹಾಗಾಗಿ, ಸುಮಾರು 42 ಲಕ್ಷ ಫೋನ್ ಕರೆಗಳು ಬಂದಿದ್ದು, ಅದರಿಂದ 65 ಸಾವಿರ ಪ್ರಾಣಗಳನ್ನು ಆರೋಗ್ಯ ಕವಚ ಯೋಜನೆಯಲ್ಲಿ ಉಳಿಸುವಂಥ ಕೆಲಸ ಮಾಡಿದೆ. ಇವತ್ತು ಈ ರಾಜ್ಯದಲ್ಲಿ ಸಂಪೂರ್ಣವಾಗಿ ಒಳ್ಳೆಯ ಕೆಲಸವಾಗುತ್ತಿದೆ. ಬಡವರ ಮನೆ ಬಾಗಿಲಿಗೆ ತ್ರಲುಪತಕ್ಕಂಥ ಯೋಜನೆ ಇದಾಗಿದೆ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಇವತ್ತು ಒಂದು ಲೀಟರ್ ಡೀಸೆಲ್ ಬೆಲೆ 40 ರೂಪಾಯಿಗಳಿರಬಹುದು ನನಗೆ ಸರಿಯಾಗಿ ಗೊತ್ತಿಲ್ಲ. ಒಂದು Ambulance ಒಂದು ಲೀಟರ್ ಡೀಸೆಲ್‌ಗೆ 20–25 ಕಿ.ಮೀ. ದೂರ ಹೋಗಬಹುದೆನ್ನುವ ಭಾವನೆ ಇಟ್ಟುಕೊಂಡು MOU ಮಾಡಿದ್ದೇವೆ. ಅದರ ಬಗ್ಗೆ ನನ್ನ ಹತ್ತಿ correct ಆದ ಮಾಹಿತಿ ಇಲ್ಲ. ನಾನು ನಿಮಗೆ ಸರಿಯಾದ ಉತ್ತರ ಕೊಡುತ್ತೇನೆ. MOU ಮಾಡುವ ಸಮಯದಲ್ಲಿ Ambulance 30 ಕಿ.ಮೀ. ಓಡಬೇಕೇ ಅಥವಾ 35 ಕಿ.ಮೀ. ಓಡಬೇಕೇ ಎನ್ನುವ ಬಗ್ಗೆ ನಾವು ತಿಳಿಸಿದ್ದೇವೆ.

(ಗೊಂದಲ)

ಅಧ್ಯಕ್ಷರು : ಅವರು ಉತ್ತರಿಸುವುದಕ್ಕೆ ಬಿಡಿ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ : ಅದು ಒಳ್ಳೆಯ scheme, 42 ಲಕ್ಷ ಜನರು ಫೋನ್ ಕಾಲ್ ಮಾಡಿದ್ದಾರೆ, 65 ಸಾವಿರ ಜನರ ಪ್ರಾಣ ಉಳಿಸಿದ್ದಾರೆ ಎನ್ನುವುದೆಲ್ಲ ಸರಿ, ನಾವು ಅದರ ಬಗ್ಗೆ ಕೇಳಲಿಲ್ಲ. ಒಂದು ಕಿ.ಮೀ ಓಡುವುದಕ್ಕೆ ಎಷ್ಟು ಹಣ ಕೊಡುತ್ತಿದ್ದೀರಿ ಅಥವಾ ಕೊಟ್ಟಿದ್ದೀರಿ ಎನ್ನುವ ಬಗ್ಗೆ ಕೇಳಿದ್ದೇವಷ್ಟೇ. ಅದು ಬಿಟ್ಟು ಬೇರೆ ವಿಷಯ ಬೇಕಾಗಿಲ್ಲ. ಆ Ambulance ಆ ಸಂಸ್ಥೆಯದಲ್ಲ, ಅದನ್ನು ಸರ್ಕಾರದ ಹಣದಿಂದ ಕೊಂಡುಕೊಂಡಿದ್ದಾರೆ. ಅದಕ್ಕೆ adopt ಮಾಡಿರುವ ಎಲ್ಲಾ materials ಸರ್ಕಾರದ್ದಾಗಿದೆ. ಡೀಸೆಲ್ ಹಣವನ್ನೂ ಸಹ ಸರ್ಕಾರವೇ ಕೊಡುತ್ತಿದೆ. ಆ ನರ್ಸ್‌ಗಳಿಗೂ ಸಹ ಸರ್ಕಾರವೇ ಸಂಬಳ ಕೊಡುತ್ತಿದೆ. ಅದಲ್ಲದೆ, ಮುಂಗಡವಾಗಿ 40 ಕೋಟಿ ರೂಪಾಯಿಗಳನ್ನು ಆ ಸಂಸ್ಥೆಗೆ ಕೊಟ್ಟಿದ್ದಾರೆ. ಇವೆಲ್ಲ ರಾಜ್ಯದ ಜನರಿಗೆ ಗೊತ್ತಾಗಬೇಕಲ್ಲವೇ? ವ್ಯಾಪಾರವನ್ನು ಮುಗುಮ್ಮಾಗಿ ಮಾಡಬೇಕೆ? ಅಲ್ಲಿ ಏನು ಒಪ್ಪಂದ ನಡೆದಿದೆ ಎನ್ನುವುದನ್ನು ಹೇಳಿ.

ಶ್ರೀ ವೈ.ಎನ್.ರುದ್ರೇಶ್‌ಗೌಡ : ಮಂತ್ರಿಯಾಗಿ ಡೀಸೆಲ್ ಬೆಲೆ ಗೊತ್ತಿಲ್ಲವೆಂದರೆ ಏನರ್ಥ ಇದು ನಾಚಿಕೆಗೇಡಿನ ವಿಷಯ

ಶ್ರೀ ಕೆ.ಎಂ.ಶಿವಲಿಂಗೇಗೌಡ : ನನಗೆ ಕಿ.ಮೀ.ಗೆ ಎಷ್ಟು ಹಣ ಕೊಡುತ್ತಿದ್ದೀರಿ ಎನ್ನುವುದು ಗೊತ್ತಾಗಲೇಬೇಕು. ಬಹಳ ಜನ ಅಧಿಕಾರಿಗಳನ್ನು ಕೇಳಿದರೂ ಅವರು

ಅದನ್ನು ಮುಚ್ಚಿಡುತ್ತಿದ್ದಾರೆ. ಈ ಸದನದಲ್ಲಿರುವ ಎಲ್ಲಾ ಸದಸ್ಯರೂ ಈ ಬಗ್ಗೆ ನಂತರ ವಿಮರ್ಶೆ ಮಾಡಲಿ. ಮೊದಲು ಆ ವಿಷಯ ಗೊತ್ತಾಗಬೇಕು.

ಶ್ರೀ ಪಿ.ಎಂ. ಅಶೋಕ್ : ಒಂದು Ambulance ಒಂದು ಲೀಟರ್ ಡೀಸೆಲ್‌ನಲ್ಲಿ 5–8 ಕಿ.ಮೀ. ಹೋಗಬಹುದಷ್ಟೇ. ಒಂದು ಲೀಟರ್ ಡೀಸೆಲ್‌ನಲ್ಲಿ 30 ಕಿ.ಮೀ. ಹೋಗುವುದಕ್ಕೆ Ambulance ಅನ್ನು scooter ಎಂದು ಭಾವಿಸಿದ್ದಾರೆಯೇ? ಇದು 108–Ambulance, kinetic Honda ಅಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಒಂದು ಕಿ.ಮೀ.ಗೆ ಎಷ್ಟು ಖರ್ಚಾಗುತ್ತದೆನ್ನುವುದನ್ನು ನನಗೆ ಹೇಳಬೇಕು.

ಶ್ರೀ ಬಿ. ಶ್ರೀರಾಮುಲು : ಒಂದು ಕಿ.ಮೀ.ಗೆ 29 ರೂಪಾಯಿ ಎಂದಿದ್ದು, ಅದರಲ್ಲಿ Drivers, Ambulance ನಲ್ಲಿದ್ದಂಥ ಇಬ್ಬರು staff, ನಂತರ, call centre ನಲ್ಲಿ ಸುಮಾರು 6603 ನೌಕರರು ಕೆಲಸ ಮಾಡುತ್ತಿದ್ದು, ಈ ಎಲ್ಲಾ ಖರ್ಚು ಸೇರಿ ಕಿ.ಮೀ.ಗೆ 29 ರೂ. ತರಹ MOU ಮಾಡುವ ಸಂದರ್ಭದಲ್ಲಿ fix ಮಾಡಲಾಗಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : Ambulance ಸರ್ಕಾರದ್ದು. ದಯಮಾಡಿ, ಅದಕ್ಕೆ 40 ಕೋ.ರೂ.ಗಳನ್ನು ಮುಂಗಡವಾಗಿ ಕೊಟ್ಟಿದ್ದಾರೆ. ಇದು ಈ ರಾಜ್ಯದ ಜನತೆಯ ಹಣ. ನಾನು ಆಗಲೇ ಹೇಳಿದಹಾಗೆ, ಚಿನ್ನದ ಸೂಜಿ ಎಂದು ಕಣ್ಣಿಗೆ ಚುಚ್ಚಿಕೊಳ್ಳಬೇಡಿ. ಇಲ್ಲಿ ಬಹಳ ಮೋಸ ನಡೆದಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : 45 ಕೋಟಿ ರೂಪಾಯಿಗಳು ಎಂದು ಹೇಳುತ್ತಿದ್ದಾರೆ. ಯಾವುದು ಸತ್ಯ? ದಯಮಾಡಿ ಹೇಳಬೇಕು.

ಶ್ರೀ ಎಸ್. ಸುರೇಶ್‌ಕುಮಾರ್ : ಸದಸ್ಯರಾದ ಶಿವಲಿಂಗೇಗೌಡರವರು ಆರೋಗ್ಯ ಕವಚದ ಬಗ್ಗೆ ಎಲ್ಲರಿಗೂ ಆಸಕ್ತಿ ಬರುವ ಹಾಗೆ ಒಂದಷ್ಟು ಮಾಹಿತಿಗಳನ್ನು, question ಗಳನ್ನು ಕೇಳುತ್ತಿದ್ದಾರೆ, ಪ್ರಾಯಶಃ ಈ ಬಗ್ಗೆ ಚರ್ಚೆಯ ಅಗತ್ಯವಿದೆ. ಇದನ್ನು ಅಲ್ಪಾವಧಿ ಚರ್ಚೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು : O.K. ಆ ರೀತಿ ಮಾಡೋಣ. ಇದನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಡಿ.ಕೆ. ಶಿವಕುಮಾರ್ : ಈಗ ಒಳ್ಳೆಯ ತೀರ್ಮಾನ ಮಾಡಿದ್ದಾರೆ. ಸುರೇಶ್‌ಕುಮಾರ್‌ರವರು ಇದಕ್ಕೊಂದು ಮಂಗಳ ಹಾಡಿದ್ದಾರೆ. ಇಲ್ಲಿ Chief Minister ರವರಿದ್ದಾರೆ. ಆದರೆ, ಆರೋಗ್ಯ ಸಚಿವರಿಗೆ ಬಹಳ ಆಸಕ್ತಿ ಇದೆ. ನಮ್ಮ ತಾಲ್ಲೂಕಿಗೆ ಕರೆದ ತಕ್ಷಣ ಬಂದಿದ್ದಾರೆ, ಅದನ್ನು ನೋಡಿದ್ದೇನೆ. ಅವರನ್ನು ಎಲ್ಲಾ ಕಡೆಗೆ ತಿರುಗಿಸಿದರೆ ಬಹುಶಃ ಅವರಿಗೆ education ಆಗುತ್ತದೆ, ಅವರಿಗೆ ಈ

ವಿಚಾರವೆಲ್ಲ ಅರ್ಥವಾಗುತ್ತದೆ. ಅವರು tour ಮಾಡುವುದಕ್ಕೆ ದಯವಿಟ್ಟು Chief Minister ರವರು ಸೂಚಿಸಿದರೆ ಎಲ್ಲಾ problem sort out ಆಗುತ್ತದೆ.

ಅಧ್ಯಕ್ಷರು : ಈ ವಿಷಯದ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆ.

ಗಂಗಾ ಕಲ್ಯಾಣ ಯೋಜನೆ ಕುರಿತು

10(110) ಶ್ರೀ.ಬಿದರೂರು.ಎಸ್.ವಿರೂಪಾಕ್ಷಪ್ಪ (ಗದಗ)
ಶ್ರೀ ಡಿ.ಸುಧಾಕರ್ (ಸಮಾಜ ಕಲ್ಯಾಣ ಸಚಿವರು)

ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಹಾಗೂ ಹಿಂದುಳಿದ ವರ್ಗಗಳ ನಿಗಮದಿಂದ ಅನುಷ್ಠಾನಗೊಳ್ಳಬೇಕಾದ ಗಂಗಾ ಕಲ್ಯಾಣ ಯೋಜನೆಗಳು 2008–09ನೇ ಸಾಲಿನಲ್ಲಿ ಹಾಗೂ ಅದಕ್ಕೂ ಹಿಂದಿನ ಸಾಲಿನಲ್ಲಿ ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮ ಯಾವುದು?

ಗಂಗಾ ಕಲ್ಯಾಣ ಯೋಜನೆಯನ್ನು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ; ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಹಾಗೂ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವುಗಳು ಅನುಷ್ಠಾನಗೊಳಿಸಲಾಗುತ್ತಿದ್ದು ಈಗಾಗಲೇ ಕೊರೆಯಲಾದ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ಸ್ ಅಳವಡಿಸಿ ವಿದ್ಯುದ್ಧೀಕರಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಬಿದರೂರು ಎಸ್. ವಿರೂಪಾಕ್ಷಪ್ಪ : ಸಚಿವರು ಒದಗಿಸಿದ ಉತ್ತರ ಪರಿಪೂರ್ಣವಾಗಿಲ್ಲವೆನ್ನುವುದು ನನ್ನ ಅನಿಸಿಕೆ. ಗಂಗಾ ಕಲ್ಯಾಣ ಯೋಜನೆಗಳು ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಗಮನಕ್ಕೆ ಬಂದಿದೆ ಎಂದು ಒಪ್ಪಿಕೊಂಡಿದ್ದಾರೆ. 2009–10ನೇ ಸಾಲಿನಲ್ಲಿ ಬೋರ್‌ವೆಲ್‌ಗಳನ್ನು ಕೊರೆಯುವ ಗುತ್ತಿಗೆದಾರ ಇಲ್ಲಿಯವರೆಗೆ ಬೋರ್‌ವೆಲ್‌ಗಳನ್ನು ಕೊರೆದಿಲ್ಲ. ಈಗಾಗಲೇ 2008–09ರ ಸಾಲಿನದು ಕೂಡ ಅಪೂರ್ಣಗೊಂಡಿದೆ. ಪೂರ್ಣಗೊಳಿಸುವುದಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ ಎಂದು ಕೇಳಿದ್ದಕ್ಕೆ, ಕೊರೆದ ಬಾವಿಗಳಿಗೆ ವಿದ್ಯುತ್ ಅನ್ನು ಒದಗಿಸಿ ಪೂರ್ಣಗೊಳಿಸುತ್ತೇವೆಂದು ಹೇಳಿದ್ದಾರೆ. ಆದರೆ, ಅಲ್ಲಿ ಇನ್ನೂ ಬಾವಿಯನ್ನೇ ಕೊರೆದಿಲ್ಲ. ಆದ್ದರಿಂದ, ಈ ಉತ್ತರ ಅಪೂರ್ಣವಾಗುತ್ತದೆಂಬುದು ನನ್ನ ಅನಿಸಿಕೆಯಾಗಿದೆ. ಈ ಬಗ್ಗೆ ವಿವರವಾದ ಉತ್ತರ ನೀಡಬೇಕೆಂದು ನಾನು ಕೋರುತ್ತೇನೆ.